ಬಾಹ್ಯಾಕಾಶ ತಂತ್ರಗಾರಿಕೆ ಕುರಿತ ರಾಷ್ಟ್ರೀಯ ಸಮಾವೇಶ ಉದ್ಘಾಟನೆ

ಬೆಂಗಳೂರು :ನವೆಂಬರ್ 18,2005

ಬಾಹ್ಯಾಕಾಶ ಹಾಗೂ ಸಂಬಂಧಿತ ತಂತ್ರಗಾರಿಕೆಗಳ ಐದನೇ ರಾಷ್ಟ್ರೀಯ ಸಮಾವೇಶ ಹಾಗೂ ಪ್ರದರ್ಶನವನ್ನು ನಗರದಲ್ಲಿಂದು ಉದ್ಘಾಟಿಸಲಾಯಿತು . ಬಾಹ್ಯಾಕಾಶ ಹಾಗೂ ಸಂಬಂಧಿತ ತಂತ್ರಗಾರಿಕೆಗಳ ಭಾರತದ ರಾಷ್ಟ್ರೀಯ ಸಂಘಟನೆ (ಐ ಎನ್ ಎಸ್ ಎ ಆರ್ ಎಂ ) ಏರ್ಪಡಿಸಿದ್ದ ಈ ಸಮಾವೇಶವನ್ನು ಇಸ್ರೋ, ಹೆಚ್ ಎ ಎಲ್, ಡಿ ಆರ್ ಡಿ ಓ ಹಾಗೂ ಬಾಹ್ಯಾಕಾಶ ಇಲಾಖೆಯ ಆಂತರಿಕ್ಷ ನಿಗಮ ಪ್ರಾಯೋಜಿಸಿದೆ . ಉದ್ಘಾಟನಾ ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಐಸೇಕ್ ನಿರ್ದೇಶಕರಾದ ಡಾ. ಕೆ. ಎನ್ ಶಂಕರ ಮಾತನಾಡುತ್ತ ಉಪಗ್ರಹದಲ್ಲಿ ಬಳಕೆಯಾಗುವ ಸೌರ ಫಲಕಗಳು , ಆ್ಯಂಟನಗಳು ಹಾಗೂ ಇನ್ನಿತರೆ ಉಪಕರಣಗಳು ಗರಿಷ್ಠ ಮಟ್ಟದ ವಿಶ್ವಾಸಾರ್ಹತೆಯನ್ನು ಹೊಂದಿರಬೇಕು . ಇಂತಹ ವಿಶ್ವಾಸಾರ್ಹ ಉಪಕರಣಗಳನ್ನು ತಯಾರು ಮಾಡಲು ಅಗತ್ಯವಾದ ತಂತ್ರಗಾರಿಕೆಯನ್ನು ಇಸ್ರೋ ಹೊಂದಿದ್ದು ಮಿತ್ಸುಬಿಶಿ ಎಲೆಕ್ಟ್ರಿಕ್ ಕಂಪನಿ ಹಾಗೂ ಇನ್ನಿತರೆ ಸಂಸ್ಥೆಗಳಿಗೆ ಇವನ್ನು ವರ್ಗಾಯಿಸಲಾಗಿದೆ ಎಂದು ಡಾ. ಶಂಕರ ತಿಳಿಸಿದರು .

ಸಾಗರ ಅಭಿವೃದ್ಧಿ ಇಲಾಖೆಯ ಕಾರ್ಯದರ್ಶಿಯಾದ ಡಾ. ಪಿ ಎಸ್ ಗೋಯಲ್ ಮಾತನಾಡುತ್ತ ಬಾಹ್ಯಾಕಾಶ ತಂತ್ರಗಾರಿಕೆ ಕ್ಷೇತ್ರದಲ್ಲಿ ಐಸೇಕ್ ಮಹತ್ವಪೂರ್ಣ ಪ್ರಗತಿಯನ್ನು ಸಾಧಿಸಿದ್ದು ಯಾವುದೇ ವೈಫಲ್ಯ ಅವರ ಮನೋಬಲವನ್ನು ಕುಂದಿಸಿಲ್ಲ ಎಂದು ಶ್ಲಾಘೀಸಿದರು . ಈಗಿಂದ 15 ರಿಂದ 30 ವರ್ಷಗಳ ನಂತರ ಉಪಯುಕ್ತವಾಗಬಲ್ಲ ತಂತ್ರಗಾರಿಕೆಯನ್ನು ಅಭಿವೃದ್ಧಿ ಪಡಿಸುವ ಜವಾಬ್ದಾರಿಯನ್ನು ತಂತ್ರಜ್ಞರು ವಹಿಸಿಕೊಳ್ಳಬೇಕೆಂದು ಸೂಚಿಸಿದರು . ಐ ಎನ್ ಎಸ್ ಎ ಆರ್ ಎಂ ಅಧ್ಯಕ್ಷರಾದ ಶ್ರಿ ಅಬ್ದುಲ್ ಮಾಜಿದ್ , ದೇಶದಲ್ಲಿ ತಂತ್ರಗಾರಿಕೆ ಕುರಿತಂತೆ ರಾಷ್ಟ್ರೀಯ ಸಂಗ್ರಹಾಲಯವನ್ನು ಸ್ಥಾಪಿಸುವ ಪ್ರಸ್ತಾಪವಿದೆ ಎಂದು ತಿಳಿಸಿದರು .

ಬಾಹ್ಯಾಕಾಶ ತಂತ್ರಗಾರಿಕೆ ವಲಯದಲ್ಲಿ ವಿನ್ಯಾಸ ,ಜೋಡಣೆ , ಪರೀಕ್ಷಣೆ ಹಾಗೂ ವಿಶ್ಲೇಷಣೆ ಕ್ಷೇತ್ರದಲ್ಲಿ ಇತ್ತೀಚಿನ ಪ್ರಗತಿಯನ್ನು ಚರ್ಚಿಸುವ ಉದ್ದೇಶವನ್ನು ಈ ಸಮಾವೇಶ ಹೊಂದಿದೆ . ಸಂಶೋಧನಾ ಹಾಗೂ ಅಭಿವೃದ್ಧಿ ಸಂಸ್ಥೆಗಳು, ಶೈಕ್ಷಣಿಕ ಸಂಸ್ಥೆಗಳು ಹಾಗೂ ಕೈಗಾರಿಕೆಗಳಿಂದ 350 ಪ್ರತಿನಿಧಿಗಳು ಈ ಸಮಾವೇಶದಲ್ಲಿ ಪಾಲ್ಗೊಳ್ಳಲಿದ್ದು ವಿವಿಧ ವಿಷಯಗಳಲ್ಲಿ 56 ಪ್ರಬಂಧನಗಳನ್ನು ಮಂಡಿಸಲಾಗುವುದು .

******

ಅದ :ಪಚ:ಸು:ಆ:ಕ: ಬೆಂ:18:00 18–11–2005